Akashvani : Bengaluru
National Bulletin In Kannada
24.09.2025 : 1310hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

24.09.2025 : 1310hrs

*******

ಮುಖ್ಯಾಂಶಗಳು

೧. ಇಂಧನ ಮತ್ತು ವಿದ್ಯುತ್ ಕ್ಷೇತ್ರದತ್ತ ಕೃಷಿ ವೈವಿಧ್ಯಗೊಳಿಸುವುದು ಇಂದಿನ ಅಗತ್ಯ- ಸಚಿವ ನಿತಿನ್ ಗಡ್ಕರಿ ಪ್ರತಿಪಾದನೆ

೨. ಮುಂದಿನ ೫ ವರ್ಷಗಳಲ್ಲಿ ಶುದ್ಧ ಇಂಧನ ವಿಸ್ತರಣೆಯತ್ತ ಭಾರತ ಮಹತ್ವದ ಹೆಜ್ಜೆ; ಇಂಧನ ಉತ್ಪನ್ನಗಳ ಅಮೆರಿಕ ಜತೆಗಿನ ವ್ಯಾಪಾರಕ್ಕೆ ಆದ್ಯತೆ- ಕೇಂದ್ರ ಸಚಿವ ಪಿಯೂಶ್ ಗೋಯಲ್

೩. ಅನಿಮೇಷನ್ ಮತ್ತು ಮನರಂಜನಾ ಕ್ಷೇತ್ರ ಉತ್ತೇಜನಕ್ಕೆ ದೇಶಾದ್ಯಂತ ೭ ಹೊಸ ಇನ್ಕ್ಯುಬೇಷನ್ ಕೇಂದ್ರಗಳ ಸ್ಥಾಪನೆಗೆ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಸಜ್ಜು

೪. ಏಷ್ಯಾ ಕಪ್ ಕ್ರಿಕೆಟ್ : ಸೂಪರ್ ಫೋರ್ ಹಂತದಲ್ಲಿ ಇಂದು ಭಾರತ - ಬಾಂಗ್ಲಾದೇಶ ಮುಖಾಮುಖಿ

*************

ಇಂಧನ ಮತ್ತು ವಿದ್ಯುತ್ ಕ್ಷೇತ್ರದತ್ತ ಕೃಷಿಯನ್ನು ವೈವಿಧ್ಯಗೊಳಿಸುವುದು ದೇಶದ ಅಗತ್ಯವಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಒತ್ತಿ ಹೇಳಿದ್ದಾರೆ. ದೆಹಲಿಯಲ್ಲಿ ಇಂದು ನಡೆದ ಇಂಡಿಯಾ ಬಯೋ ಎನರ್ಜಿ ಮತ್ತು ತಂತ್ರಜ್ಞಾನ ಪ್ರದರ್ಶನ ೨ ನೇ ಆವೃತ್ತಿಯನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ಭಾರತದ ಜನಸಂಖ್ಯೆಯ ಶೇ. ೬೫ ರಷ್ಟು ಜನರು ಕೃಷಿ ಮತ್ತು ಗ್ರಾಮೀಣ ಪ್ರದೇಶಗಳಿಗೆ ಸೇರಿದವರಾಗಿದ್ದಾರೆ. ಆದರೆ ಜಿಡಿಪಿಗೆ ಅವರ ಕೊಡುಗೆ ಕೇವಲ ಶೇಕಡಾ ೧೪ ರಷ್ಟಿದೆ ಎಂದು ಹೇಳಿದರು. ರೈತರು ತಮ್ಮ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಪಡೆಯದಿರುವುದರಿಂದ ಹಳ್ಳಿಗಳಲ್ಲಿ ಬಡತನ ಮತ್ತು ನಿರುದ್ಯೋಗ ನಿರ್ಮಾಣವಾಗುತ್ತಿದೆ ಎಂದು ಅವರು ಹೇಳಿದ್ದಾರೆ.

*************

ಮುಂದಿನ ಐದು ವರ್ಷಗಳಲ್ಲಿ ತನ್ನ ಶುದ್ಧ ಇಂಧನವನ್ನು ವಿಸ್ತರಿಸಲು ಭಾರತವು ಉತ್ತಮ ಸ್ಥಾನದಲ್ಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ನ್ಯೂಯಾರ್ಕ್ ನಲ್ಲಿ ನಡೆದ ಅಮೆರಿಕ-ಭಾರತ ವ್ಯೂಹಾತ್ಮಕ ಪಾಲುದಾರಿಕೆ ವೇದಿಯನ್ನುದ್ದೇಶಿಮಾತನಾಡಿದ ಸಚಿವರು, ಸರ್ಕಾರವು ತನ್ನ ಶುದ್ಧ ಇಂಧನ ಸಾಮರ್ಥ್ಯವನ್ನು ೨೫೦ ಗಿಗಾವ್ಯಾಟ್ ಗಳಿಂದ ೫೫೦ ಗಿಗಾವ್ಯಾಟ್ ಗಳಿಗೆ ಹೆಚ್ಚಿಸುವ ಗುರಿಯನ್ನು ಹೊಂದಿದೆ ಎಂದು ಹೇಳಿದರು. ಭಾರತದ ಇಂಧನ ಭದ್ರತಾ ಗುರಿಗಳು ಅಮೆರಿಕದ ಪಾಲ್ಗೊಳ್ಳುವಿಕೆಯ ಉನ್ನತ ಅಂಶವನ್ನು ಹೊಂದಿರುತ್ತವೆ. ಇದು ಭಾರತಕ್ಕೆ ಹೆಚ್ಚಿನ ಸ್ಥಿರತೆ, ವೈವಿಧ್ಯಮಯ ಇಂಧನ ಮೂಲಗಳನ್ನು ಖಚಿತಪಡಿಸುತ್ತದೆ ಮತ್ತು ಇಂಧನ ಮತ್ತು ಅದರಾಚೆಗೆ ವಿವಿಧ ರಂಗಗಳಲ್ಲಿ ಅಮೆರಿಕದಲ್ಲಿ ಅಪರಿಮಿತ ಸಾಧ್ಯತೆಗಳನ್ನು ಮುಕ್ತಗೊಳಿಸಲು ಸಹಾಯ ಮಾಡುತ್ತದೆ ಎಂದು ಸಚಿವರು ಹೇಳಿದ್ದಾರೆ. ಮುಂಬರುವ ವರ್ಷಗಳಲ್ಲಿ ಇಂಧನ ಉತ್ಪನ್ನಗಳ ಮೇಲೆ ಅಮೆರಿಕ ಜತೆಗಿನ ವ್ಯಾಪಾರವನ್ನು ಹೆಚ್ಚಿಸಲು ಸರ್ಕಾರ ನಿರೀಕ್ಷಿಸುತ್ತದೆ. ಹಾಗೆಯೇ ಪರಮಾಣು ಶಕ್ತಿಯಲ್ಲಿ ಭಾರತ ಮತ್ತು ಅಮೆರಿಕ ಸಹಕರಿಸಲು ಯೋಜಿಸಬಹುದು ಎಂದು ಗೋಯಲ್ ಹೇಳಿದ್ದಾರೆ.

*************

ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಧ್ಯೇಯದೊಂದಿಗೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ದೇಶದಲ್ಲಿ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿರತವಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ ವಿಶೇಷ ಸರಣಿ - "ಸೇವಾ ಪರ್ವ" ದಲ್ಲಿಂದು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸೃಜನಶೀಲತೆ ಮತ್ತು ತಂತ್ರಜ್ಞಾನ ಬಳಕೆಯೊಂದಿಗೆ, ವಿಶ್ವ ಶ್ರವ್ಯ, ದೃಶ್ಯ ಮತ್ತು ಮನರಂಜನಾ ಶೃಂಗಸಭೆ ? ವೇವ್ಸ್ ಮೂಲಕ ಭಾರತವನ್ನು ಹೇಗೆ ಮಾಧ್ಯಮ ಹಾಗೂ ಮನೋರಂಜನೆ ಕ್ಷೇತ್ರದ ಜಾಗತಿಕ ಕೇಂದ್ರವನ್ನಾಗಿ ರೂಪಿಸುತ್ತಿದೆ ಎಂಬುದರ ಕುರಿತ ಒಂದು ವಿಶೇಷ ವರದಿ ಇದೀಗ ಮೂಡಿಬರಲಿದೆ.

ವರದಿ:

ಭಾರತವನ್ನು ಸೃಜನಶೀಲತೆ ಮತ್ತು ಸಂಸ್ಕೃತಿಯ ಆಧಾರದ ಮೇಲೆ ಜಾಗತಿಕ ನಾಯಕನಾಗಿಸುವುದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ದೃಷ್ಟಿಕೋನವಾಗಿದೆ. ಇದೇ ದೃಷ್ಟಿಕೋನದ ಭಾಗವಾಗಿ ಮುಂಬೈನಲ್ಲಿ ಮೇ ೧ ರಿಂದ ೪ರವರೆಗೆ ವೇವ್ಸ್ ಶೃಂಗಸಭೆ ಮೊದಲಬಾರಿಗೆ ಆಯೋಜಿಸಲಾಯಿತು. ಭಾರತವನ್ನು ಮಾಧ್ಯಮ, ಮನರಂಜನೆ ಹಾಗೂ ಡಿಜಿಟಲ್ ನವಿನ್ಯತೆಗಳ ಜಾಗತಿಕ ಕೇಂದ್ರವನ್ನಾಗಿ ಮಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ವಿಶ್ವದ ವಿವಿಧೆಡೆಯಿಂದ ವಿಷಯ ರಚನಾಕಾರರು, ನವೋದ್ಯಮಗಳು, ಕೈಗಾರಿಕಾ ನಾಯಕರು ಮತ್ತು ನೀತಿ ನಿರೂಪಕರು ಈ ಸಮಾವೇಶದಲ್ಲಿ ಭಾಗವಹಿಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಂಬೈನಲ್ಲಿ ವೇವ್ಸ್ ಶೃಂಗಸಭೆ ಉದ್ಘಾಟಿಸಿ ಮಾತನಾಡುತ್ತಾ, ಭಾರತದಲ್ಲಿ ಸೃಜನಶೀಲ ಆರ್ಥಿಕತೆ ಜಿಡಿಪಿಗೆ ಮಹತ್ವಪೂರ್ಣ ಕೊಡುಗೆ ನೀಡಬಹುದು ಎಂದು ಹೇಳಿದ್ದರು.

**ಧ್ವನಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ**

ವೇವ್ಸ್, ಚಿತ್ರರಂಗ, ಒಟಿಟಿ, ಗೇಮಿಂಗ್, ಕಾಮಿಕ್‌ಗಳು, ಡಿಜಿಟಲ್ ಮೀಡಿಯಾ, ಎಐ, ಎವಿಜಿಸಿ-ಎಕ್ಸ್ ಆರ್, ಪ್ರಸಾರ ಹಾಗೂ ಇತರ ನವೀನ ತಂತ್ರಜ್ಞಾನಗಳನ್ನು ಒಂದೇ ವೇದಿಕೆಯಡಿ ತಂದು, ಭಾರತದಲ್ಲಿನ ಮಾಧ್ಯಮ ಮತ್ತು ಮನರಂಜನೆ ಸಾಮರ್ಥ್ಯವನ್ನು ಪ್ರಪಂಚದ ಮುಂದಿಟ್ಟಿದೆ. ಯುನೆಸ್ಕೋದ ಲಜಾರ್ ಎಲೋಂಡೂ ಕೂಡ ಭಾರತ ನವೀನತೆಗೆ ಉತ್ತೇಜನ ನೀಡುತ್ತಿರುವ ಕುರಿತು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಹಲವು ಸವಾಲುಗಳ ನಡುವೆ, ವ್ಯಾಪಕ ವೇದಿಕೆ ಅವಕಾಶಗಳನ್ನು ಒದಗಿಸುತ್ತಿರುವ ವೇವ್ಸ್, ಭಾರತದ ಮಾಧ್ಯಮ ಮತ್ತು ಮನರಂಜನೆ ಕ್ಷೇತ್ರದ ಮುಂದಿನ ಹಾದಿಯ ಮೇಲೆ ಪ್ರಮುಖ ಸಕಾರಾತ್ಮಕ ಪರಿಣಾಮ ಬೀರಿದೆ.

*************

ಸ್ಟಾರ್ಟ್-ಅಪ್ ಆಕ್ಸಿಲರೇಟರ್ ಪ್ಲಾಟ್ ಫಾರ್ಮ್ ವೇವ್‌ಎಕ್ಸ್ ಮಾಧ್ಯಮ, ಅನಿಮೇಷನ್ ಮತ್ತು ಮನರಂಜನಾ ಕ್ಷೇತ್ರವನ್ನು ಬೆಂಬಲಿಸಲು ದೇಶಾದ್ಯಂತ ಏಳು ಹೊಸ ಇನ್ಕ್ಯುಬೇಷನ್ ಕೇಂದ್ರಗಳನ್ನು ಪ್ರಾರಂಭಿಸುವುದಾಗಿ ಘೋಷಿಸಿದೆ. ದೆಹಲಿಯ ಇಂಡಿಯನ್ ಇನ್ಸ್ ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಷನ್, ಜಮ್ಮು, ಒಡಿಶಾದ ಧೆಂಕನಲ್, ಕೇರಳದ ಕೊಟ್ಟಾಯಂ, ಮಹಾರಾಷ್ಟ್ರದ ಅಮರಾವತಿ, ಪುಣೆಯ ಫಿಲ್ಮ್ ಅಂಡ್ ಟೆಲಿವಿಷನ್ ಇನ್ಸ್ ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು

ಕೋಲ್ಕತ್ತಾದ ಸತ್ಯಜಿತ್ ರೇ ಫಿಲ್ಮ್ ಅಂಡ್ ಟೆಲಿವಿಷನ್ ಇನ್ಸ್ ಸ್ಟಿಟ್ಯೂಟ್ ನಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ. ಈ ಇನ್ಕ್ಯುಬೇಷನ್ ನೆಟ್ ವರ್ಕ್ ಗಳನ್ನು ಪ್ರಾರಂಭಿಸುವುದರೊಂದಿಗೆ ಸ್ಟಾರ್ಟ್ಅಪ್ ಗಳು ಚಲನಚಿತ್ರ ನಿರ್ಮಾಣ, ಆಟದ ಅಭಿವೃದ್ಧಿ ಮತ್ತು ಸಂಪಾದನೆಗಾಗಿ ಸುಧಾರಿತ ಸೌಲಭ್ಯಗಳಿಗೆ ಪ್ರವೇಶವನ್ನು ಪಡೆಯುತ್ತವೆ ಎಂದು ಸಚಿವಾಲಯ ಹೇಳಿದೆ. ಹೊಸ ಕೇಂದ್ರಗಳು ಮುಂಬೈನ ಇಂಡಿಯನ್ ಇನ್ಸ್ ಸ್ಟಿಟ್ಯೂಟ್ ಆಫ್ ಕ್ರಿಯೇಟಿವ್ ಟೆಕ್ನಾಲಜೀಸ್ ನಂತೆಯೇ ಮೂಲಸೌಕರ್ಯ ಮತ್ತು ಇನ್ಕ್ಯುಬೇಷನ್ ಸೌಲಭ್ಯಗಳನ್ನು ಒದಗಿಸಲಿವೆ. ರಾಷ್ಟ್ರವ್ಯಾಪಿ ಉತ್ತಮ ಗುಣಮಟ್ಟದ ಇನ್ಕ್ಯುಬೇಷನ್, ಮೂಲಸೌಕರ್ಯ ಮತ್ತು ಮಾರ್ಗದರ್ಶನಕ್ಕೆ ಏಕರೂಪದ ಪ್ರವೇಶವನ್ನು ಖಚಿತಪಡಿಸುತ್ತವೆ ಎಂದು ಸಚಿವಾಲಯ ಹೇಳಿದೆ.

*************

ಪ್ರಧಾನಮಂತ್ರಿ ಆವಾಸ್ ಯೋಜನೆ-ಗ್ರಾಮೀಣ ಅಡಿಯಲ್ಲಿ ೨ ಕೋಟಿ ೮೨ ಲಕ್ಷಕ್ಕೂ ಹೆಚ್ಚು ಮನೆಗಳು ಪೂರ್ಣಗೊಂಡಿವೆ ಎಂದು ಸರ್ಕಾರ ಹೇಳಿದೆ. ಗ್ರಾಮೀಣ ಪ್ರದೇಶಗಳಲ್ಲಿ 'ಸರ್ವರಿಗೂ ಸೂರು' ಒದಗಿಸಲು ಈ ಯೋಜನೆಯನ್ನು ೨೦೧೬ ರಲ್ಲಿ ಪ್ರಾರಂಭಿಸಲಾಗಿದೆ. ಈ ಯೋಜನೆಯು ಅರ್ಹ ಗ್ರಾಮೀಣ ಕುಟುಂಬಗಳಿಗೆ ಅಡುಗೆಮನೆ ಮತ್ತು ಶೌಚಾಲಯದಂತಹ ಮೂಲಭೂತ ಸೌಲಭ್ಯಗಳೊಂದಿಗೆ ಪಕ್ಕಾ ಮನೆಗಳನ್ನು ನಿರ್ಮಿಸಲು ಸಹಾಯ ಮಾಡುತ್ತಿದೆ. ಇದು ಬಡತನವನ್ನು ತಗ್ಗಿಸುವ ಮೂಲಕ, ಜೀವನ ಮಟ್ಟವನ್ನು ಹೆಚ್ಚಿಸುವುದು ಮತ್ತು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವ ಮೂಲಕ ಗ್ರಾಮೀಣ ವಸತಿಯನ್ನು ಗಮನಾರ್ಹವಾಗಿ ಸುಧಾರಿಸಿದೆ. ಈ ವರ್ಷದ ಆಗಸ್ಟ್ ವೇಳೆಗೆ ಗ್ರಾಮೀಣಾಭಿವೃದ್ಧಿ ಸಚಿವಾಲಯ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಒಟ್ಟು ೪ ಕೋಟಿ ೧೨ ಲಕ್ಷ ರೂಪಾಯಿಗಳನ್ನು ಹಂಚಿಕೆ ಮಾಡಿದೆ. ಈ ಪೈಕಿ ೩ ಕೋಟಿ ೮೫ ಲಕ್ಷ ಮನೆಗಳನ್ನು ಮಂಜೂರು ಮಾಡಲಾಗಿದೆ ಮತ್ತು ೨ ಕೋಟಿ ೮೨ ಲಕ್ಷ ಹೆಚ್ಚು ಮನೆಗಳು ಪೂರ್ಣಗೊಂಡಿವೆ ಎಂದು ಸಚಿವಾಲಯ ಹೇಳಿದೆ.

*************

ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳು, ಭಾರತದ ಪರೋಕ್ಷ ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸುವತ್ತ ಮಹತ್ವದ ಹೆಜ್ಜೆಯನ್ನು ಪ್ರತಿನಿಧಿಸುತ್ತಿದೆ. ಇದೇ ೨೨ರಂದು ಈಗಾಗಲೇ ಜಾರಿಗೆ ತರಲಾದ ಜಿಎಸ್‌ಟಿ ಸುಧಾರಣೆಗಳ ಪ್ರಯೋಜನಗಳನ್ನು ಜನರು ಪಡೆಯಬಹುದಾಗಿದೆ. ಹೊಸ ರಚನೆಯ ಅಡಿಯಲ್ಲಿ, ಉS೩ಖಿ ಮಂಡಳಿಯು ೫, ೧೨, ೧೮, ಮತ್ತು ೨೮ ಪ್ರತಿಶತದ ಹಿಂದಿನ ನಾಲ್ಕು ಹಂತದ ರಚನೆಯನ್ನು ೫ ಪ್ರತಿಶತ ಮತ್ತು ೧೮ ಪ್ರತಿಶತದ ಎರಡು ಹಂತದ ರಚನೆಯಾಗಿ ಸರಳಗೊಳಿಸಿದೆ. ವ್ಯಾಪಕ ಶ್ರೇಣಿಯ ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ ದರ ಕಡಿಮೆಯಾಗಿದ್ದು ಇದು ಸಾಮಾನ್ಯ ಸಹಾಯವಾಗುತ್ತಿದೆ. ಸರ್ಕಾರವು ಆಹಾರ ಉತ್ಪನ್ನಗಳ ಮೇಲೆನ ತೆರಿಗೆಯನ್ನು ಕಡಿಮೆ ಮಾಡಿರುವುದರಿಂದ. ಮಧ್ಯಮ ವರ್ಗ ಮತ್ತು ಕೆಳಮಧ್ಯಮ ವರ್ಗದ ಕುಟುಂಬಗಳಿಗೆ ಅನುಕೂಲವಾಗಲಿದೆ. ತರಕಾರಿಗಳ ಮೇಲಿನ ತೆರಿಗೆಯನ್ನು ಶೇಕಡಾ ೧೨ ರಿಂದ ಶೇಕಡಾ ೫ ಕ್ಕೆ ಇಳಿಸಲಾಗಿದ್ದ,. ಸಂಸ್ಕರಿಸಿದ ಹಣ್ಣಿನ ಉತ್ಪನ್ನಗಳ ಮೇಲೆ ವಿಧಿಸಲಾಗಿದ್ದ ತೆರಿಗೆಯನ್ನು ಶೇಕಡಾ ೧೨ ರಿಂದ ಶೇಕಡಾ ೫ಕ್ಕೆ ಇಳಿಸಲಾಗಿದೆ. ಈ ಕ್ರಮವು ಆಹಾರ ಸಂಸ್ಕರಣಾ ವಲಯವನ್ನು ಉತ್ತೇಜಿಸುವುದು, ಮೌಲ್ಯವರ್ಧನೆ, ರಫ್ತುಗಳನ್ನು ಉತ್ತೇಜಿಸುವುದು ಮತ್ತು ವೆಚ್ಚವನ್ನು ಕಡಿಮೆ ಮಾಡುವ ಮೂಲಕ ರೈತರು ಮತ್ತು ಗ್ರಾಹಕರಿಗೆ ಪ್ರಯೋಜನವನ್ನು ನೀಡುವ ಗುರಿಯನ್ನು ಹೊಂದಿದೆ.

*************

ಪುರುಷರ ಟಿ೨೦ ಏಷ್ಯಾಕಪ್ ಟೂರ್ನಿಯಲ್ಲಿ ಭಾರತ ಮತ್ತು ಬಾಂಗ್ಲಾದೇಶ ತಂಡಗಳು ಇಂದು ರಾತ್ರಿ ದುಬೈ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಸೂಪರ್ ಫೋರ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ.

*************